ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಹಣ ಮರದ ಮೇಲೆ ಬೆಳೆಯುತ್ತದೆಯೆ?*



ಮರದ ಮೇಲಲ್ಲ, ಗಿಡದ ಮೇಲೆ! ಸ್ಯೂಯೇಜ್ ಪ್ಲಾಂಟ್, ಟ್ರೀಟ್‌ಮೆಂಟ್ ಪ್ಲಾಂಟ್, ಪವರ್ ಪ್ಲಾಂಟ್, ಇತ್ಯಾದಿ ಪ್ಲಾಂಟ್‌ಗಳಲ್ಲಿ ಬೆಳೆಯುತ್ತದೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಹಣ, ಅಂತಸ್ತು, ಅಧಿಕಾರ, ಎಲ್ಲಾ ಶಾಶ್ವತವಾಗಿ ಸಿಗುವಂತಾಗಿದ್ದರೆ ರಾಜಕಾರಣಿಗಳು ಏನು ಮಾಡುತ್ತಿದ್ದರು?*

ನೆಹರು ವಂಶಸ್ಥರಂತೆಯೇ ಬೇಕಾಬಿಟ್ಟಿ ಬದುಕುತ್ತಿದ್ದರು.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಜನ್ಮವಿತ್ತ ತಂದೆ ತಾಯಿಗಾಗಿ ಜೀವ ಕಳೆದುಕೊಳ್ಳದ ಕೆಲವು ಹುಡುಗರು ಪ್ರೀತಿಸಿದ ಹುಡುಗಿಗಾಗಿ ಜೀವ ಕಳೆದುಕೊಳ್ಳುತ್ತಾರಲ್ಲಾ...?*

ಸರಿಯೇ; ಜೀವನ ಒನ್‌ವೇ, ತಂದೆ–ತಾಯಿಯರು ಎಂಟ್ರಿ ಪಾಯಿಂಟ್, ಲವರ್ ಎಕ್ಸಿಟ್ ಪಾಯಿಂಟ್!

ಅಶ್ವಿನಿ ವಿ. ಹೆಗಡೆ, ಭೈರುಂಬೆ

*ಬಡವ ಸೈಕಲ್ ತುಳಿದರೆ ಗತಿಯಿಲ್ಲದವನು, ಶ್ರೀಮಂತ ತುಳಿದರೆ ಕಂಜೂಸ್ ಎನ್ನುವರಲ್ಲಾ, ಹಾಗಿದ್ದರೆ ಸೈಕಲ್ ತುಳಿಯಬೇಕಾದುದು ಯಾರು?*



ಆ ಕಡೆ ಏಕೆ ಗಮನ ನೀಡುವಿರಿ? ತುರುಕಿ ಕಿವಿಗೆ ಹತ್ತಿ, ಸೈಕಲ್ ಹತ್ತಿ!

ಆನಂದ ವಿ. ಶೇಟ್, ಬಿಸಿಲಕೊಪ್ಪ

*ಇಲ್ಲೊಬ್ಬರು ಮನೆ ಖಾಲಿ ಇಲ್ಲದಿದ್ದರೂ ಟುಲೆಟ್ ಬೋರ್ಡ್ ಹಾಕಿದ್ದಾರಲ್ಲಾ...?*

ತಿಳಿಯಿತು ಬಿಡಿ. ಅದು ಟು ಲೆಟ್ ಬೋರ್ಡುಗಳನ್ನು ಬರೆದು ಮಾರುವವನ ಮನೆ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಪಕ್ಷ ಬದಲಿಸುವ ರಾಜಕಾರಣಿಗೂ, ಬಣ್ಣ ಬದಲಿಸುವ ಗೋಸುಂಬೆಗೂ ಏನು ವ್ಯತ್ಯಾಸ?*

ಗೋಸುಂಬೆ ಬಣ್ಣ ಬದಲಿಸಲು ಸೂಟ್‌ಕೇಸ್ ಕೇಳುವುದಿಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಎದೆಯ ಹಾಲು ಬತ್ತುತ್ತೆ, ಆದರೆ ತಾಯಿಯ ಮಮತೆ ಯಾವತ್ತೂ ಬತ್ತುವುದಿಲ್ಲ. ಏಕೆ?*

ಎದೆಯ ಹಾಲು ವರ್ಷಕಾಲದ ಹುಚ್ಚುಹೊಳೆ; ತಾಯಿಯ ಮಮತೆ ಹಿಮಾಲಯದೆತ್ತರದಿಂದ ಹರಿಯುವ ಜೀವಗಂಗೆ!

ಅರಕೆರೆ ಸುರೇಶ್, ಭದ್ರಾವತಿ

*ಹೆಣ್ಣಿನ ಕಣ್ಣಿಗೂ, ಜಿಂಕೆಯ ಕಣ್ಣಿಗೂ ಏನು ವ್ಯತ್ಯಾಸ?*

ಜಿಂಕೆಯ ಕಣ್ಣಿಗೆ ಮಸ್ಕರಾ, ಐ ಶ್ಯಾಡೋ, ಐ ಲೈನರ್, ಐ ಬ್ರೋ ಶೇಪಿಂಗ್, ಕೂಲಿಂಗ್ ಗ್ಲಾಸ್ ಯಾವುದೂ ಬೇಕಾಗಿಲ್ಲ.

ರಾಜೇಂದ್ರ ಹೆಗಡೆ, ಹಾವೇರಿ

*ಕಾಫಿಯಲ್ಲಿ ಕೆಫೀನ್, ಟೀಯಲ್ಲಿ ಟ್ಯಾನಿನ್ ಎಂಬ ವಿಷವಿದ್ದರೂ ಗಂಡಸರು ಅವನ್ನು ಚಪ್ಪರಿಸುತ್ತಾರೆ. ಹೆಣ್ಣಿನಲ್ಲಿನ ಯಾವ ಸ್ವಾದಕ್ಕೆ ಗಂಡಸರು ಬಲಿ ಬೀಳುತ್ತಾರೆ?*

ಬ್ಯೂಟೀನ್ (ಬ್ಯೂಟಿ+ಟೀನ್) ಎಂಬ ಮದವೇರಿಸುವ ಸ್ವಾದಕ್ಕೆ.

ಟಿ.ಆರ್. ರವೀಂದ್ರ, ಬೆಂಗಳೂರು

*ನೀವು ಈ ದೇಶದ ಪ್ರಧಾನಿಯಾದರೆ ಮಾಡುವ ಮೊದಲ ಕೆಲಸ ಮತ್ತು ಕೊನೆಯ ಕೆಲಸ ಯಾವುದು?*

ಮೊದಲ ಕೆಲಸ ಜಾತಿ– ಮೀಸಲಾತಿ ಬದಲಿಗೆ ಆರ್ಥಿಕಸ್ಥಿತಿಯಾಧಾರಿತ ಮೀಸಲಾತಿ, ಕಡೆಯದು ರಾಜೀನಾಮೆ.

ಪಾರ್ವತಿ ರಮೇಶ, ಮೈಸೂರು

*ಎ.ಸಿ. ರೂಮಿನಲ್ಲಿ ಮಲಗುವ ಮಕ್ಕಳು ವೃದ್ಧಾಪ್ಯದಲ್ಲಿರುವ ತಂದೆ ತಾಯಿಗಳಿಗೆ ಸ್ಟೇರ್ ಕೇಸ್ ಕೆಳಗಿನ 3X 6 ಅಡಿ ರೂಮಿನಲ್ಲಿ ವಾಸ್ತವ್ಯ ಮಾಡಿಸುತ್ತಾರಲ್ಲಾ...?*

ಸುಡುಗಾಡಿನಲ್ಲಿ ಅದೇ ಸೈಜ್‌ನ ಹಳ್ಳದಲ್ಲಿ ಮಲಗಲು ಈಗಿನಿಂದಲೇ ರಿಹರ್ಸಲ್ ಮಾಡಿಸುವ ಉದ್ದೇಶವಂತೆ!

ಎಂ.ಬಿ. ಪ್ರೀತಿ ಪ್ರಜ್ವಲ್, ಬೆಂಗಳೂರು

*ಮಂಡೋದರಿ ಅಂತ ಯಾರೂ ಯಾಕೆ ಹೆಸರು ಇಟ್ಕೊಳ್ಳೋದಿಲ್ಲ?*

ರಾವಣನಂತಹ ಪತಿ ಸಿಕ್ಕಿಬಿಟ್ಟಾನೆಂಬ ಭಯ!

## ಬಹುಮಾನಿತ ಪ್ರಶ್ನೆ

ಹಾಡ್ಯ ಬಿ. ಜಯಾನಂದ, ಮೈಸೂರು

*ಭೂದಾನ, ಗೋದಾನ, ಕನ್ಯಾದಾನಗಳಲ್ಲಿ ಯಾವುದು ಶ್ರೇಷ್ಠ?*

ಉಳ್ಳವರು ಈ ದಾನಗಳ ಮಾಡುವರಯ್ಯಾ, ನಮಗೆ ನೇತ್ರದಾನ, ರಕ್ತದಾನ, ದೇಹದಾನಗಳೇ ಶ್ರೇಷ್ಠ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಕಾಫಿ ಶಾಪ್‌ನಲ್ಲಿ ಹೆಚ್ಚಿಗೆ ಮಾತಾಡೋಲ್ಲ, ವೈನ್ ಶಾಪ್‌ನಲ್ಲಿ ಹೆಚ್ಚು ಮಾತು. ಏಕೆ?*

ಒಳಗಿನಿಂದ ಒದ್ದುಕೊಂಡು ಬರುವ ಕಿಕ್‌ಗೆ ನಾಲಿಗೆ ಸಡಿಲವಾಗುವುದರಿಂದ!

ಕೆ. ಮೈಥಿಲಿಕೃಷ್ಣ, ಬೆಂಗಳೂರು

*ಯಾವುದು ಆರಾಮ ಮತ್ತು ಲಾಭಕರ ಮಂತ್ರಿಯಾಗಿಯೇ ಉಳಿಯುವುದೋ, ಚಮಚಾ ಆಗಿ ತೆರೆಮರೆಯಲ್ಲಿರುವುದೋ?*

ಚಮಚಾ ಆದರೆ ರೈಡ್‌ನ ಭಯವಿಲ್ಲ, ಒಂದೇ ಚಮಚ ಬೇರೆ ಬೇರೆ ಪ್ಲೇಟ್‌ಗಳಿಂದ ಆಯ್ದುಕೊಳ್ಳಬಹುದು!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಕೆಲವರು 60 ವಯಸ್ಸು ದಾಟಿದರೂ ಕೆಲಸಕ್ಕೆ ಹೋಗಲು ಕಾರಣ?*



ದುಡಿಯಬೇಕಾದ ಮಗ 90 ಹಾಕಿ ಮೋರಿಯಲ್ಲಿ ಬಿದ್ದಿರುತ್ತಾನಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಏಪ್ರಿಲ್ ತಿಂಗಳಲ್ಲಿ ಜನಿಸಿದವರೆಲ್ಲಾ ಮಹಾನ್ ವ್ಯಕ್ತಿಗಳಾಗುತ್ತಾರಂತೆ. ನೀವೇನಂತೀರಿ?*

ಹುಚ್ಚಪ್ಪ! ಹೆಸರು ಮಾಸದಿರಬೇಕಾದರೆ ಮುಖ್ಯವಾದುದು ಮಾಸವಲ್ಲ, ಧ್ಯಾಸ ಮತ್ತು ಅಭ್ಯಾಸ!

ಆರ್. ಮಧುಸೂದನ್, ಹಾಸನ

*ಗಣಪತಿ ತನ್ನ ಕೈಯಲ್ಲಿ ಅರ್ಧ ತುಂಡಾಗಿರುವ ದಂತವನ್ನು ಹಿಡಿದುಕೊಂಡಿರುವುದೇಕೆ?*

ಅದನ್ನೂ ಬಿಸಾಕಿಬಿಟ್ಟರೆ ಶಿವ ಇನ್ಯಾವುದೋ ಪ್ರಾಣಿಯ ಹಲ್ಲು ತಂದು ಜೋಡಿಸಿಬಿಟ್ಟಾನೆಂಬ ಭಯ!

■ ರಾಮ್